ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**180**
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು.
ಉತ್ತರಿಸಬೇಕಾದ ದಿನಾಂಕ	:	**14-12-2021**

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪ್ರಸ್ತುತ ಸ್ಥಾಪಿಸಲಾಗಿರುವ ಜವಳಿ ಪಾರ್ಕ್ ಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ರಾಜ್ಯ ಸರ್ಕಾರ ಒಡೆತನದ ಮತ್ತು ಖಾಸಗಿ ಒಡೆತನದ ಪಾರ್ಕ್ ಗಳು ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು).	ರಾಜ್ಯದಲ್ಲಿ ಪ್ರಸ್ತುತ ಸ್ಥಾಪಿಸಲಾಗಿರುವ ಜವಳಿ ಪಾರ್ಕ್‌ಗಳ ಸಂಖ್ಯೆ 04 ಕೇಂದ್ರ ಸರ್ಕಾರದ ಸ್ಕೀಮ್ ಫಾರ್ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ (SITT) ಯೋಜನೆಯಡಿಯಲ್ಲಿ 02 ಜವಳಿ ಪಾರ್ಕ್‌ಗಳು, ರಾಜ್ಯ ಸರ್ಕಾರದ ನೂತನ ಜವಳಿ ನೀತಿ 2013-18ರಡಿಯಲ್ಲಿ ಗ್ರೀನ್‌ಫೀಲ್ಡ್ ಟೆಕ್ಸ್‌ಟೈಲ್ ಪಾರ್ಕ್ ಕಾರ್ಯಕ್ರಮದಲ್ಲಿ 02 ಜವಳಿ ಪಾರ್ಕ್‌ಗಳು. 1) **ದೊಡ್ಡಬಳ್ಳಾಪುರ ಇಂಟಗ್ರೇಟೆಡ್ ಟೆಕ್ಸ್ ಟೈಲ್ ಪಾರ್ಕ್**(Scheme for Integrated Textile Park):- ಈ ಜವಳಿ ಪಾರ್ಕ್ ಅನ್ನು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದಲ್ಲಿ 46.50 ಎಕರೆ ವಿಸ್ತೀರ್ಣದಲ್ಲಿ ರೂ.9210.00 ಲಕ್ಷಗಳ ಬಂಡವಾಳ ಹೂಡಿಕೆಯೊಂದಿಗೆ ಜವಳಿ ಚಟುವಟಿಕೆಗಳಾದ ವೀವಿಂಗ್(ನೇಯ್ಗೆ), ಸೈಜಿಂಗ್, ವಾರ್ಪಿಂಗ್ ಮತ್ತು ಗಾರ್ಮೆಂಟ್ ಘಟಕಗಳು ಸೇರಿದಂತೆ ಒಟ್ಟು 85 ಘಟಕಗಳು ಸ್ಥಾಪಿಸಲಾಗಿದ್ದು, ಸುಮಾರು 2000 ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. 2) **ಗುಲ್ಬರ್ಗಾ ಟೆಕ್ಸ್ ಟೈಲ್ ಪಾರ್ಕ್(Scheme for integrated Textile Park):** ಈ ಜವಳಿ ಪಾರ್ಕ್ ಅನ್ನು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ನಂದೂರು ಕೆಸರಟಗಿ ಗ್ರಾಮದಲ್ಲಿ 50 ಎಕರೆ ವಿಸ್ತೀರ್ಣದ ಜಾಗವನ್ನು KIADB ಮುಖಾಂತರ ಪಡೆದಿದ್ದು ಕೇಂದ್ರ ಸರ್ಕಾರದಿಂದ ರೂ.4904.00 ಲಕ್ಷಗಳಲ್ಲಿ ಯೋಜನಾ ಮೊತ್ತ ಅನುಮೋದನೆಯಾಗಿರುತ್ತದೆ. ಯೋಜನಾ ಮಾರ್ಗಸೂಚಿಯಂತೆ SPV ಪದಾಧಿಕಾರಿಗಳು ಹಾಗೂ ಸದಸ್ಯರು ಬ್ಯಾಂಕ್‌ನಿಂದ ಸಾಲ ಹಾಗೂ ಸದಸ್ಯರ ವಂತಿಕೆ ಭರಿಸಲು ವಿಫಲರಾಗಿರುವುದರಿಂದ ನಿಗದಿತ ಸಮಯದಲ್ಲಿ ಜವಳಿ ಪಾರ್ಕ್ ಅನುಷ್ಠಾನ ಆಗದಿರುವ ಕಾರಣ ಕೇಂದ್ರ ಸರ್ಕಾರವು ಸದರಿ ಯೋಜನೆಯನ್ನು ರದ್ದುಗೊಳಿಸಿರುತ್ತದೆ. 3) **ಬೈನರಿ ಅಪೇರೆಲ್ ಪಾರ್ಕ್ ಪ್ರೈ. ಲಿ., ಬಗ್ಗನಾಡು ಗ್ರಾಮ, ಹಿರಿಯೂರು ತಾ॥ ಚಿತ್ರದುರ್ಗ ಜಿಲ್ಲೆ:-** ಈ ಜವಳಿ ಪಾರ್ಕ್ ಅನ್ನು ಖಾಸಗಿ ಒಡೆತನದೊಂದಿಗೆ ರಾಜ್ಯ ಸರ್ಕಾರದ ಜವಳಿ ನೀತಿ ಅಡಿ 25 ಎಕರೆ ವಿಸ್ತೀರ್ಣದಲ್ಲಿ ಮೊದಲ ಹಂತವಾಗಿ, ಒಟ್ಟು ಯೋಜನಾ ಮೊತ್ತ ರೂ.2824.94 ಲಕ್ಷಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ಪ್ರಸ್ತುತ ಘಟಕದಲ್ಲಿ

ಸುಮಾರು 1900 ಜನರಿಗೆ ಉದ್ಯೋಗ ಒದಗಿಸಲಾಗಿರುತ್ತದೆ. 2ನೇ ಹಂತದಲ್ಲಿ ಯೋಜನಾ ಮೊತ್ತ ರೂ.2126.72 ಲಕ್ಷಗಳಲ್ಲಿ ಜವಳಿ ಪಾರ್ಕ್ ಅನುಷ್ಠಾನ ಹಂತದಲ್ಲಿರುತ್ತದೆ.

4) **ಮೆ॥ ಕುರಣೆ ಟೆಕ್ಸ್ ಟೈಲ್ ಪಾರ್ಕ್ ಪ್ರೈ. ಲಿ., ಬುಗಟೆ ಆಲೂರು ಗ್ರಾಮ, ಹುಕ್ಕೇರಿ ತಾ॥ ಬೆಳಗಾವಿ:-**
ಈ ಜವಳಿ ಪಾರ್ಕ್ ರಾಜ್ಯ ಸರ್ಕಾರದ ಯೋಜನೆಯಿಂದ 18 ಎಕರೆ ವಿಸ್ತೀರ್ಣದಲ್ಲಿ ಒಟ್ಟು ಯೋಜನಾ ಮೊತ್ತ ರೂ.4768.11 ಲಕ್ಷಗಳಲ್ಲಿ ಅನುಷ್ಠಾನ ಹಂತದಲ್ಲಿರುತ್ತದೆ.

ಆ) ಈ ಜವಳಿ ಪಾರ್ಕ್ ಗಳ ಸ್ಥಾಪನೆಗೆ ತಗಲಿರುವ ವೆಚ್ಚವೆಷ್ಟು; ಮತ್ತು ಈ ವೆಚ್ಚಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆತ ಆರ್ಥಿಕ ಅನುದಾನ ಎಷ್ಟು; (ಕಾರ್ಯಕ್ರಮವಾರು ಮತ್ತು ಯೋಜನಾವಾರು ಸಂಪೂರ್ಣ ಮಾಹಿತಿ ನೀಡುವುದು).

1) **ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.** ಈ ಜವಳಿ ಪಾರ್ಕ್ ಕೇಂದ್ರ ಸರ್ಕಾರದ SITP (Scheme for Integrated Textile Park) ಯೋಜನೆಯಡಿ ಅನುಮೋದಿಸಲ್ಪಟ್ಟಿದ್ದು, ಅನುದಾನದ ವಿವರ ಈ ಕೆಳಕಂಡಂತಿರುತ್ತದೆ:-

(ರೂ.ಲಕ್ಷಗಳಲ್ಲಿ)

ಕಾಂಪೊನೆಂಟ್	ಯೋಜನಾ ಮೊತ್ತ	ರಾಜ್ಯ ಸರ್ಕಾರದ ಅನುದಾನ	ಕೇಂದ್ರ ಸರ್ಕಾರದ ಅನುದಾನ
ಸಾಮಾನ್ಯ ಮೂಲಭೂತ ಸೌಕರ್ಯ	9209.97	481.68	3197.22
ಒಟ್ಟು	**9209.97**	**481.68**	**3197.22**

2) **ಗುಲ್ಬರ್ಗಾ ಟೆಕ್ಸ್‌ಟೈಲ್ ಪಾರ್ಕ್, ನಂದೂರು ಕೆಸರಟಗಿ, ಗುಲ್ಬರ್ಗಾ ಜಿಲ್ಲೆ.** ಈ ಜವಳಿ ಪಾರ್ಕ್ ಕೇಂದ್ರ ಸರ್ಕಾರದ SITP (Scheme for Integrated Textile Park) ಯೋಜನೆಯಡಿ ಅನುಮೋದಿಸಲ್ಪಟ್ಟಿದ್ದು, ಅನುದಾನದ ವಿವರ ಈ ಕೆಳಕಂಡಂತಿರುತ್ತದೆ:-

(ರೂ.ಲಕ್ಷಗಳಲ್ಲಿ)

ಕಾಂಪೊನೆಂಟ್	ಯೋಜನಾ ಮೊತ್ತ	ರಾಜ್ಯ ಸರ್ಕಾರದ ಅನುದಾನ	ಕೇಂದ್ರ ಸರ್ಕಾರದ ಅನುದಾನ
ಸಾಮಾನ್ಯ ಮೂಲಭೂತ ಸೌಕರ್ಯ	4904.00	450.00	185.00
ಒಟ್ಟು	**4904.00**	**450.00**	**185.00**

3) **ಬೈನರಿ ಅಪೇರೆಲ್ ಪಾರ್ಕ್ ಪ್ರೈ. ಲಿ., ಬಗ್ಗನಾಡು ಗ್ರಾಮ, ಹಿರಿಯೂರು ತಾ॥ ಚಿತ್ರದುರ್ಗ ಜಿಲ್ಲೆ.** ಈ ಜವಳಿ ಪಾರ್ಕ್ ಅನ್ನು ರಾಜ್ಯ ಸರ್ಕಾರದ ಜವಳಿ ನೀತಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಮೊದಲನೇ ಹಂತ:-

(ರೂ.ಲಕ್ಷಗಳಲ್ಲಿ)

ಕಾಂಪೊನೆಂಟ್	ಯೋಜನಾ ಮೊತ್ತ	ಯೋಜನಾ ಮೊತ್ತದಶೇ.40 ರಷ್ಟು ಅರ್ಹ ಮೊತ್ತ	ಇಲ್ಲಿಯ ವರೆಗೆ ಬಿಡುಗಡೆ ಮಾಡಲಾದ ಮೊತ್ತ	ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾದ ಮೊತ್ತ
ಸಾಮಾನ್ಯ ಮೂಲಭೂತ ಸೌಕರ್ಯ	2824.94	1129.976	1129.976	1129.976
ಒಟ್ಟು	**2824.94**	**1129.976**	**1129.976**	**1129.976**

ಎರಡನೇ ಹಂತ:-

(ರೂ.ಲಕ್ಷಗಳಲ್ಲಿ)

ಕಾಂಪೊನೆಂಟ್	ಯೋಜನಾ ಮೊತ್ತ	ಯೋಜನಾ ಮೊತ್ತದ ಶೇ.40 ರಷ್ಟು ಅರ್ಹ ಮೊತ್ತ	ಇಲ್ಲಿಯವರೆಗೆ ಬಿಡುಗಡೆ ಮಾಡಲಾದ ಮೊತ್ತ	ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾದ ಮೊತ್ತ
5 ಘಟಕಗಳ ಕಟ್ಟಡಗಳು & ಡಾರ್ಮಿಟರಿ	2126.72	850.69	255.20	ಯೋಜನೆ ಅನುಷ್ಠಾನ ಹಂತದಲ್ಲಿರುತ್ತದೆ.
ಒಟ್ಟು	**2126.72**	**850.69**	**255.20**	

4) **ಮೆ॥ ಕುರಣೆ ಟೆಕ್ಸ್‌ಟೈಲ್ ಪಾರ್ಕ್ ಪ್ರೈ. ಲಿ., ಬುಗಟ ಆಲೂರು ಗ್ರಾಮ, ಹುಕ್ಕೇರಿ ತಾ॥ ಬೆಳಗಾವಿ** ಈ ಜವಳಿ ಪಾರ್ಕ್ ಅನ್ನು ರಾಜ್ಯ ಸರ್ಕಾರದ ಜವಳಿ ನೀತಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

(ರೂ.ಲಕ್ಷಗಳಲ್ಲಿ)

ಕಾಂಪೊನೆಂಟ್	**ಯೋಜನಾ ಮೊತ್ತ**	**ಯೋಜನಾ ಮೊತ್ತದ ಶೇ.40 ರಷ್ಟು ಅರ್ಹ ಮೊತ್ತ**	**ಇಲ್ಲಿಯವರೆಗೆ ಬಿಡುಗಡೆ ಮಾಡಲಾದ ಮೊತ್ತ**	**ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾದ ಮೊತ್ತ**
ಸಾಮಾನ್ಯ ಮೂಲಭೂತ ಸೌಕರ್ಯ	4768.11	1907.24	286.086	286.086
ಒಟ್ಟು	**4768.11**	**1907.24**	**286.086**	**286.086**

ಇ) ಈ ಜವಳಿ ಪಾರ್ಕ್ ಗಳಿಂದ ಸೃಷ್ಟಿಯಾದ ಉದ್ಯೋಗಾವಕಾಶಗಳು ಎಷ್ಟು;

1. ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್ ಟೈಲ್ ಪಾರ್ಕ್, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ – ಸುಮಾರು 2000 ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ.
2. ಗುಲ್ಬರ್ಗಾ ಟೆಕ್ಸ್ ಟೈಲ್ ಪಾರ್ಕ್ ನಿಗಧಿತ ಸಮಯದಲ್ಲಿ ಜವಳಿ ಪಾರ್ಕ್ ಅನುಷ್ಠಾನ ಆಗದಿರುವ ಕಾರಣ ಕೇಂದ್ರ ಸರ್ಕಾರವು ಸದರಿ ಯೋಜನೆಯನ್ನು ರದ್ದುಗೊಳಿಸಿರುತ್ತದೆ.
3. ಬೈನರಿ ಅಪೇರೆಲ್ ಪಾರ್ಕ್ ಪ್ರೈ. ಲಿ., ಬಗ್ಗನಾಡು ಗ್ರಾಮ, ಹಿರಿಯೂರುತಾ॥ ಚಿತ್ರದುರ್ಗಜಿಲ್ಲೆ – ಮೊದಲನೇ ಹಂತದ ಯೋಜನೆ ಪೂರ್ಣಗೊಂಡಿದ್ದು, ಸುಮಾರು 1900 ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ.
4. ಮೆ॥ ಕುರಣೆ ಟೆಕ್ಸ್ ಟೈಲ್ ಪಾರ್ಕ್ ಪ್ರೈ. ಲಿ., ಬುಗಟಿ ಆಲೂರು ಗ್ರಾಮ, ಹುಕ್ಕೇರಿ ತಾ॥ ಬೆಳಗಾವಿ ಜಿಲ್ಲೆ ಜವಳಿ ಪಾರ್ಕ್ ಅನುಷ್ಠಾನ ಹಂತದಲ್ಲಿರುತ್ತದೆ.

ಈ) ಕೈಮಗ್ಗ ಮತ್ತು ಜವಳಿ ಕ್ಷೇತ್ರಗಳಲ್ಲಿ ರಾಜ್ಯದ ಕಿತ್ತೂರು-ಕರ್ನಾಟಕ ವಿಭಾಗದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ನೇಕಾರರು ವಾಸಿಸುತ್ತಿದ್ದು, ಈ ನೇಕಾರರ ಸಮುದಾಯದವರಿಗೆ ಉತ್ತೇಜನ, ಪ್ರೋತ್ಸಾಹ ಮತ್ತು ತರಬೇತಿ

ಕೈಮಗ್ಗ ಮತ್ತು ವಿದ್ಯುತ್ ಮಗ್ಗ ವಲಯದಲ್ಲಿನ ನೇಕಾರರ ಸಮುದಾಯದವರಿಗೆ ಉತ್ತೇಜನ, ಪ್ರೋತ್ಸಾಹ ನೀಡಲು ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ:-

ಕೈಮಗ್ಗ ವಲಯ :-

- ಕೇಂದ್ರ ಸರ್ಕಾರದ ಎನ್.ಹೆಚ್.ಡಿ.ಪಿ ಯೋಜನೆಯಡಿ ಬ್ಲಾಕ್ ಲೆವೆಲ್ ಕೈಮಗ್ಗ ಕ್ಲಸ್ಟರ್ ಸ್ಥಾಪನೆ.
- ನೇಕಾರ ಸಮ್ಮಾನ್
- ನೇಕಾರರ ಸಾಲಮನ್ನಾ

	ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ಯೋಜನೆಗಳಾವುವು; ಈ ಯೋಜನೆಗಳ ಅಡಿಯಲ್ಲಿ ಇದುವರೆಗೂ ನೀಡಿರುವ ತರಬೇತಿ ಮತ್ತು ಆರ್ಥಿಕ ನೆರವು ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು)	• ನೇಕಾರರ ವೈದ್ಯಕೀಯ ವೆಚ್ಚ ಮರುಪಾವತಿ • ಮೃತ ನೇಕಾರರ ಅಂತ್ಯ ಸಂಸ್ಕಾರ ವೆಚ್ಚ ಮರು ಪಾವತಿ • ಬಡ್ಡಿ ಸಹಾಯಧನ-ನಬಾರ್ಡ್ ಪುನರ್ಧನ ಯೋಜನೆ • ಹೊಸ ವಿನ್ಯಾಸ ಮತ್ತು ಪ್ರವೃತ್ತಿ (ಪ್ರವಾಸ) • ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ (ಶೇಕಡ 20% ರಿಬೇಟ್) • ಏಳಿಗೆ ನಿಧಿ ಯೋಜನೆ • ಏಳಿಗೆ ಮೇಲಿನ ಬಡ್ಡಿ • ಶೇ.1 ರ & ಶೇ.3 ರ ದರದಲ್ಲಿ ಬಡ್ಡಿ ಸಹಾಯಧನ • ಒಂದಾವರ್ತಿ ಪ್ರೋತ್ಸಾಹ ಧನ • ಕಚ್ಚಾಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯಧನ • ಕೈಮಗ್ಗ ವಿಕಾಸ ಯೋಜನೆ <u>ವಿದ್ಯುತ್ ಮಗ್ಗ ವಲಯ :-</u> • ಪ್ರತಿ ಯೂನಿಟ್‌ಗೆ ರೂ1.25 ರಂತೆ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ • 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ • ಎಲೆಕ್ಟ್ರಾನಿಕ್ ಜಕಾರ್ಡ್ ಅಳವಡಿಕೆಗೆ ಸಹಾಯಧನ • ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ. • ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಎಸ್.ಎಂ.ಇ ಘಟಕ ಸ್ಥಾಪನೆಗೆ ಸಹಾಯಧನ. • ರೇಪಿಯರ್ ಮಗ್ಗ ಘಟಕಗಳಿಗೆ ಶೇ.50ರಷ್ಟು ವಿದ್ಯುತ್ ಸಹಾಯಧನ ಒದಗಿಸುವುದು. ಕಿತ್ತೂರು- ಕರ್ನಾಟಕ ವಿಭಾಗಕ್ಕೆ ಈ ಯೋಜನೆಗಳ ಅಡಿಯಲ್ಲಿ ಮತ್ತು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ ಯೋಜನೆಯಡಿ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗಾಗಿ 45 ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಕಾರ್ಯಕ್ರಮವಿರುತ್ತದೆ. ಈ ಯೋಜನೆಗಳಡಿ ಇದುವರೆಗೂ ನೀಡಿರುವ ಆರ್ಥಿಕ ನೆರವಿನ ವಿವರಗಳನ್ನು **<u>ಅನುಬಂಧ- 1, ಅನುಬಂಧ-2, ಅನುಬಂಧ-3 ಹಾಗೂ ಅನುಬಂಧ-4</u>**ರಲ್ಲಿ ಒದಗಿಸಿದೆ.

ಸಂ: CI 232 JAKE 2021

(ಶಂಕರ ಬ ಪಾಟೀಲ ಮುನೇನಕೊಪ್ಪ)
ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು.

ಅನಬಂಧ-1

2018-19 ರಿಂದ 2020-21 ನೇ ಸಾಲಿಗೆ ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ವಲಯಗಳಡಿ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಕಿತ್ತೂರು-ಕರ್ನಾಟಕಕ್ಕೆ ಬಿಡುಗಡೆ ಮಾಡಲಾದ ಜಿಲ್ಲಾವಾರು ಮಾಹಿತಿ (ರೂ.ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಗಳು	ಕೈಮಗ್ಗ		ವಿದ್ಯುತ್‌ಮಗ್ಗ		ಒಟ್ಟು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬೆಳಗಾವಿ	6797	1953.96	14648	2223.21	21445	4177.17
2	ವಿಜಯಪುರ	2182	615.87	34	23.60	2216	639.47
3	ಬಾಗಲಕೋಟೆ	27802	9239.42	11051	506.07	38853	9745.49
4	ಧಾರವಾಡ	559	25.25	247	43.55	806	68.80
5	ಗದಗ	2715	294.44	2106	590.54	4821	884.98
6	ಹಾವೇರಿ	3951	158.90	299	67.53	4250	226.43
7	ಉತ್ತರ ಕನ್ನಡ	53	1.16	15	0.82	68	1.98
	ಒಟ್ಟು :-	**44059**	**12289.00**	**28400**	**3455.32**	**72459**	**15744.32**

ಅಪರ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ

(17)

ಅನುಬಂಧ-2

ನೂತನ ಜವಳಿ ನೀತಿ 2013-18 ಹಾಗೂ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ರಡಿ ಜವಳಿ ಆಧಾರಿತ ಉದ್ದಿಮೆದಾರರನ್ನು ಪ್ರೋತ್ಸಾಹಿಸಲು ಈ ಕೆಳಕಂಡ ಪ್ರೋತ್ಸಾಹಧನ ನೀಡಲಾಗುತ್ತಿದೆ.

- ಬಂಡವಾಳ ಸಹಾಯಧನ
- ಬಡ್ಡಿ ಸಹಾಯಧನ
- ವಿದ್ಯುತ್‌ಚ್ಛಕ್ತಿ ಮರುಪಾವತಿ ಸಹಾಯಧನ
- ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ರಿಯಾಯಿತಿ
- ಇ.ಎಸ್.ಐ & ಇ.ಪಿ.ಎಫ್ ಮರುಪಾವತಿ ಸಹಾಯಧನ
- ವೇತನ ಸಹಾಯಧನ

2018-19 ನೇ ಸಾಲಿನಿಂದ 2020-21 ನೇ ಸಾಲಿನ ಅವಧಿಯಲ್ಲಿ ಜವಳಿ ಆಧಾರಿತ ಉದ್ದಿಮೆದಾರರಿಗೆ ನೂತನ ಜವಳಿ ನೀತಿ 2013-18 ಹಾಗೂ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ರಡಿ ನೀಡಿರುವ ರಿಯಾಯಿತಿ/ ಪ್ರೋತ್ಸಾಹಧನಗಳು

(ರೂ.ಗಳಲ್ಲಿ)

ಕ್ರ.ಸಂ	ಜಿಲ್ಲೆ	ಭೌತಿಕ	ಆರ್ಥಿಕ
1	ಬೆಳಗಾವಿ	337	253497325
2	ವಿಜಯಪುರ	9	26863264
3	ಬಾಗಲಕೋಟೆ	16	28763025
4	ಧಾರವಾಡ	71	91636708
5	ಗದಗ	20	29915118
6	ಹಾವೇರಿ	37	10715954
7	ಉತ್ತರ ಕನ್ನಡ	3	3231202
Total		**493**	**444622596**

ಅಪರ ನಿರ್ದೇಶಕರು (ಜವಳಿ ನೀತಿ)
ಕೈಮಗ್ಗ ಮತ್ತು ಜವಳಿ

ಅನುಬಂಧ-3

ಕಿತ್ತೂರು ಕರ್ನಾಟಕದಲ್ಲಿ 2014-15ನೇ ಸಾಲಿನಿಂದ 2020-21ನೇ ಸಾಲಿನವರೆಗೆ ತರಬೇತಿ ಪಡೆದವರ ಜಿಲ್ಲಾವಾರು ವಿವರ.							
ಕ್ರ. ಸಂ	ಜಿಲ್ಲೆಗಳು	ಕೈಮಗ್ಗ		ವಿದ್ಯುತ್‌ಮಗ್ಗ		ಒಟ್ಟು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬೆಳಗಾವಿ	70	5.55	100	8.80	170	14.35
2	ಬಿಜಾಪುರ	0	0.00	0	0.00	0	0.00
3	ಬಾಗಲಕೋಟೆ	265	20.85	20	1.20	285	22.05
4	ಧಾರವಾಡ	0	0.00	0	0.00	0	0.00
5	ಗದಗ	0	0.00	250	20.20	250	20.20
6	ಹಾವೇರಿ	120	9.80	40	3.10	160	12.90
7	ಉತ್ತರ ಕನ್ನಡ	160	14.10	10	0.60	170	14.70
	ಒಟ್ಟು	**615**	**50.30**	**420**	**33.90**	**1035**	**84.20**

ಅಪರ ನಿರ್ದೇಶಕರು
ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ
ಕೈಮಗ್ಗ ಮತ್ತು ಜವಳಿ ಇಲಾಖೆ
ಬೆಂಗಳೂರು

ಅನುಬಂಧ-4

2018-19 ರಿಂದ 2020-21 ನೇ ಸಾಲಿಗೆ ಕೇಂದ್ರ ಸರ್ಕಾರದ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ (ಎನ್.ಹೆಚ್.ಡಿ.ಪಿ) ದಡಿ ಕೈಮಗ್ಗ ಬ್ಲಾಕ್ ಲೆವೆಲ್ ಕ್ಲಸ್ಟರ್ ಕಿತ್ತೂರು ಕರ್ನಾಟಕಕ್ಕೆ ಬಿಡುಗಡೆ ಮಾಡಲಾದ ಜಿಲ್ಲಾವಾರು (ರೂ.ಲಕ್ಷಗಳಲ್ಲಿ)			
ಕ್ರ. ಸಂ	ಜಿಲ್ಲೆಗಳು	ಬ್ಲಾಕ್ ಲೆವೆಲ್ ಕ್ಲಸ್ಟರ್	
		ಭೌತಿಕ	ಆರ್ಥಿಕ
1	ಬಾಗಲಕೋಟೆ	2	109.536
	ಒಟ್ಟು	**2**	**109.536**

ಅಪರ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ